21.	ಮಂಡ್ಯ	153.816
22.	ಮೈಸೂರು	73.030
23.	ರಾಯಚೂರು	42.068
24.	ಶಿವಮೊಗ್ಗ	21.330
25.	ತುಮಕೂರು	117.170
26.	ಉಡುಪಿ	10.970
27.	ಉತ್ತರ ಕನ್ನಡ	160.801
28.	ಮೈಸೂರು ಬಿತ್ತನೆ ವಲಯ	80,400
	ಒಟ್ಟು	**2684.31**

731 (546) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2006ರಲ್ಲಿ ರಾಜ್ಯದ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಪ್ರವಾಹದಿಂದ ಉಂಟಾದ ನಷ್ಟದ ಪ್ರಮಾಣವೆಷ್ಟು ;

ಆ) ಈ ಪ್ರವಾಹದಿಂದ ನೊಂದವರಿಗೆ ಸರ್ಕಾರ ನೀಡಿದ ಪರಿಹಾರವೆಷ್ಟು ;

ಇ) ಪ್ರವಾಹದಿಂದ ಯಾವ ಯಾವ ಬೆಳೆ ನಾಶ, ಆಸ್ತಿ-ಪಾಸ್ತಿ ಹಾಗೂ ರಸ್ತೆ ಹಾಳಾಗಿದೆ ;

ಈ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ನೀಡಿದ ಪರಿಹಾರ ಮೊತ್ತವೆಷ್ಟು ; (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) 2006ರಲ್ಲಿ ಪ್ರವಾಹದಿಂದ ಕೆಳಕಂಡಂತೆ ನಷ್ಟವಾಗಿರುತ್ತದೆ.

ಬೆಳಗಾವಿ ರೂ. 22675.06 ಲಕ್ಷ
ಬಿಜಾಪುರ ರೂ. 2732.50 ಲಕ್ಷ
ಬಾಗಲಕೋಟೆ ರೂ. 9902.34 ಲಕ್ಷ
ರಾಯಚೂರು ರೂ 1166.36 ಲಕ್ಷ
ಗುಲ್ಬರ್ಗಾ ರೂ 626.67 ಲಕ್ಷ

ಆ) ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಪ್ರವಾಹ ಪರಿಹಾರಕ್ಕೆ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಿದೆ

ಬೆಳಗಾವಿ ರೂ. 8363.17 ಲಕ್ಷ
ಬಿಜಾಪುರ ರೂ. 519.06 ಲಕ್ಷ
ಬಾಗಲಕೋಟೆ ರೂ. 1979.06 ಲಕ್ಷ
ರಾಯಚೂರು ರೂ. 604.86 ಲಕ್ಷ
ಗುಲ್ಬರ್ಗಾ ರೂ. 1595.83 ಲಕ್ಷ

ಇ) ಪ್ರವಾಹದಿಂದ ಕಬ್ಬು, ಮೆಕ್ಕೆ ಜೋಳ, ಸೋಯಾ ಬೀನ್, ಭತ್ತ, ಜೋಳ ಸೇಂಗಾ, ದ್ರಾಕ್ಷಿ, ಬಾಳೆ ಆಲೂಗಡ್ಡೆ, ಮಾವು ಹುರಳಿ, ರೇಷ್ಮೆ, ಹತ್ತಿ, ಸಜ್ಜೆ, ಸೂರ್ಯಕಾಂತಿ, ತರಕಾರಿ ಬೆಳೆಗಳು, ನಿಂಬೆ, ತೊಗರಿ, ಉಳ್ಳಾಗಡ್ಡಿ, ಬೆಳೆಗಳು ಹಾಳಾಗಿರುತ್ತವೆ ಹಾಗೂ ಜನಗಳ ವಾಸದ ಮನೆಗಳು, ಗ್ರಾಮೀಣ ರಸ್ತೆಗಳು, ಮೋರಿಗಳು, ಕುಡಿಯುವ ನೀರಿನ ಯೋಜನೆಗಳು, ಸರ್ಕಾರಿ ಕಟ್ಟಡಗಳು, ಶಾಲೆ/ ಹಾಸ್ಟೆಲ್ ಕಟ್ಟಡಗಳು, ಕೆರೆಗಳು, ವಿದ್ಯುತ್ ಉಪಕರಣಗಳು, ಚರಂಡಿಗಳು, ಕೆಳಮಟ್ಟದ ರಸ್ತೆ ಸೇತುವೆಗಳು ಇತ್ಯಾದಿ ಹಾಳಾಗಿರುತ್ತವೆ.

ಈ) ನೀಡಿರುವ ಪರಿಹಾರ ಕೆಳಗಿನಂತಿರುತ್ತದೆ.

ಬೆಳಗಾವಿ	ರೂ 1920.86 ಲಕ್ಷ
ಬಾಗಲಕೋಟೆ	ರೂ. 1212.58 ಲಕ್ಷ
ಬಿಜಾಪುರ	ರೂ. 365.48 ಲಕ್ಷ
ರಾಯಚೂರು	ರೂ. 629.23 ಲಕ್ಷ
ಗುಲ್ಬರ್ಗಾ	ರೂ. 626.67 ಲಕ್ಷ

732 (547) ಶ್ರೀ ಚನ್ನಬಸವರಾಜ (ಅಪ್ಪಾಜಿ) ಶಂಕರರಾವ್ ನಾಡಗೌಡ: ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2003–04ನೇ ಸಾಲಿನಿಂದ 2006–07ನೇ ಸಾಲಿನ ವರೆಗೆ (ದಿನಾಂಕ: 31–12–2006) ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು) ;

ಆ) ಇಂತಹ ರೈತ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ ವಸತಿ ನೀಡುವ ಕೇಂದ್ರ ಸರ್ಕಾರದ ಪ್ಯಾಕೇಜ್ ಅಡಿ ಕಳೆದ 3 ವರ್ಷಗಳ ಅವಧಿಯಲ್ಲಿ ನೀಡಲಾದ ಪರಿಹಾರವೆಷ್ಟು ಮತ್ತು ಕಲ್ಪಿಸಿದ ಪುನರ್ ವಸತಿಗಳಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು) ;

ಇ) ಈ ಸಂಬಂಧ ಕ್ರಿಯಾ ಯೋಜನೆ ಏನಾದರೂ ತಯಾರಿಸಲಾಗಿದೆಯೇ; (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ನಾನಾ ಕಾರಣಗಳಿಂದ ಒಟ್ಟು 1301 ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿದ್ದು, ಇದರ ಜಿಲ್ಲಾವಾರು, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ತಲಾ 1 ಲಕ್ಷ ರೂ.ಗಳಂತೆ ಪರಿಹಾರವನ್ನು ನೀಡಲಾಗುತ್ತಿದೆ. ಕೇಂದ್ರ ಸರ್ಕಾರವು ಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುವ ರಾಜ್ಯದ 6 ಜಿಲ್ಲೆಗಳಿಗೆ ಅಂದರೆ, ಬೆಳಗಾಂ, ಚಿಕ್ಕಮಗಳೂರು, ಹಾಸನ, ಕೊಡಗು, ಚಿತ್ರದುರ್ಗ ಮತ್ತು ಶಿವಮೊಗ್ಗ